**ಪಿ.ಸಿ.ಆರ್. ನಂಬರ್ಃ 2/24** **ಪಿ ಡಬ್ಲೂಃ 1**

<u>**ದಿಃ 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

**ಮುಂದುವರೆದ <u>ಪ್ರಮಾಣ</u> ಪೂರ್ವ ಹೇಳಿಕೆ<u>:</u>** ಪಿರ್ಯಾದಿದಾರ ಪರ ಶ್ರೀ ಎ ಕೆ ಟಿ ವಕೀಲರಿಂದಃ

ನನ್ನ ಹೆಸರು ಅಕ್ಷಯ ಕುಮಾರ್ ಈ ಹಿಂದೆ ನನ್ನ ಪ್ರಮಾಣ ಪೂರ್ವ ಹೇಳಿಕೆಯನ್ನು ನೀಡಿದ್ದು ಈ ದಿನ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸುತ್ತೇನೆ.

ದಿ. 29-12-2020 ರಂದು ಪೋಲೀಸ್ ಅಧೀಕ್ಷಕರು ಕಲಬುರಗಿಯವರಿಗೆ ಸಲ್ಲಿಸಿದ ದೂರಿನ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 6 ಎಂದು, ದಿ. 29-12-2020 ರಂದು ಪೋಲೀಸ್ ಆರಕ್ಷಕ ಉಪ ನಿರೀಕ್ಷಕರು ಸೇಡಂ ಪೊಲೀಸ್ ಠಾಣೆ ಇವರಿಗೆ ಸಲ್ಲಿಸಿದ ದೂರಿನ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 7 ಎಂದು, ದಿ. 02-02-2021 ರಂದು ಮುಖ್ಯ ಅಧಿಕಾರಿಗಳು ಪುರ ಸಭೇ ಸೇಡಂ ಯವರಿಗೆ ಸಲ್ಲಿಸಿದ ತಕರಾರು ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 8 ಎಂದು, ದಿ. 03-02-2021 ರಂದು ಆರಕ್ಷಕ ಉಪ ನಿರೀಕ್ಷಕರು ಸೇಡಂ ಪೊಲೀಸ್ ಠಾಣೆಯವರಿಗೆ ತಹಸೀಲ್ದಾರ್ ಸೇಡಂ ರವರು ಕಳುಹಿಸಿದ ಪತ್ರದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 9 ಎಂದು, ಒಟ್ಟು ಐದು ಭಾವ ಚಿತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 10 ರಿಂದ 14 ಎಂದು ಗುರುತಿಸಲಾಯಿತು. ನಾನು ಖರೀದಿಸಿದ ಮೊಬೈಲ್ ನ Tax invoice ನ್ನು ಹಾಜರು ಪಡಿಸಿದ್ದು ಅದನುನ ನಿ ಪಿ 15 ಎಂದು, Crl. P. No. 201279/2024 ನೇದ್ದರ order sheet, petition ನೇದ್ದರ ನಕಲುಪ್ರತಿಯನುನ ಹಾಜರು ಪಡಿಸಿದ್ದು ಅವುಗಳನ್ನು ನಿ ಪಿ 16 ಮತ್ತು 17 ಎಂದು ಗುರುತಿಸಲಾಯಿತು. ಅಪರಾಧ ಸಂಖ್ಯೆ 26/23 ರಲ್ಲಿನ ಎಫ್ ಐ ಆರ್, ದೂರಿನ ಮತ್ತು ಅಂತಿಮವರದಿಯ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ ಪಿ 18 ರಿಂದ 20 ಎಂದು, ಅಪರಾದ ಸಂಖ್ಯೆ 26/23 ರಲ್ಲಿನ ಅಪರಾದ ವಿವರ ನಮೂನೆ ಹಾಜರು ಪಡಿಸಿದ್ದು ಅದನ್ನು ನಿ ಪಿ 21 ಎಂದು, ಅಪರಾದ ಸಂಖ್ಯೆ 26/23 ರಲ್ಲಿನ ಭಾವ ಚಿತ್ರ, 7 ಹೇಳಿಕೆಯ ಪ್ರತಿಗಳು, ಗಾಯದ ಪ್ರಮಾಣ ಪತ್ರ, ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 22 ರಿಂದ 30 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪಿರ್ಯಾದೂದಾರ ಪರ ವಕೀಲರು ಮುಂದುವರೆದ ಪ್ರಮಾಣ ಪೂರ್ವ ಹೇಳಿಕಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**